ಇ) ಇಲಾಖೆಗಳ ಸೇವಾ ವಿಲೀನಕ್ಕೆ ಕಾರಣಗಳೇನು; ವಿಲೀನಗೊಂಡ ಇಲಾಖೆ ನೌಕರರನ್ನು ಮುಂಬಡ್ತಿ ಸಂದರ್ಭದಲ್ಲಿ ಜೇಷ್ಟತೆಯನ್ನು ಅನುಸರಿಸಲಾಗಿದೆಯೇ?

ಉ) ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸೇವೆಯನ್ನು ಆಧಾರವಾಗಿಟ್ಟುಕೊಂಡು ಅವರುಗಳು ಸೇವೆಗೆ ಸೇರಿದ ಸಂದರ್ಭದ ದಿನಾಂಕವನ್ನು ಜೇಷ್ಟತೆಯನ್ನಾಗಿ ಪರಿಗಣಿಸಲಾಗಿದೆಯೇ?

ಊ) ಹಾಗಿದ್ದಲ್ಲಿ, ಅಭಿವೃದ್ಧಿ ಇಲಾಖೆಯ ಸಿಬ್ಬಂದಿ ವರ್ಗದವರಿಗೆ ಸೇವಾ ಜೇಷ್ಟತೆಯನ್ನು ಪರಿಗಣಿಸದೇ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಋ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಸಚಿವರು):

ಅ) ಇಲ್ಲ. ವಿಲೀನಗೊಂಡಿರುವುದೇನೆಂದರೆ, ಹಿಂದಿನ ತಾಲ್ಲೂಕು ಅಭಿವೃದ್ಧಿ ಮಂಡಳಿ ಸಂಸ್ಥೆಗಳಲ್ಲಿ ಸೇವೆಯಲ್ಲಿದ್ದ ಲಿಪಿಕ ಹಾಗೂ ಇಂಜಿನಿಯರಿಂಗ್‌ಯೇತರ ನೌಕರರನ್ನು ಸರ್ಕಾರಿ ಸೇವೆಯಲ್ಲಿ ಕಂದಾಯ ಇಲಾಖೆಯಲ್ಲಿ ವಿಲೀನಗೊಳಿಸಲಾಗಿದೆ. ಅಂತೆಯೇ ಅಂದಿನ ತಾಲ್ಲೂಕು ಅಭಿವೃದ್ಧಿ ಸಂಸ್ಥೆಗಳಲ್ಲಿ ಇಂಜಿನಿಯರಿಂಗ್ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದವರನ್ನು ಅಧಿಸೂಚನೆ ಸಂಖ್ಯೆ ಆರ್‌ಡಿಪಿ:118:ಬಿಎಡಿ 84 ದಿನಾಂಕ 16-2-7-85 ರಲ್ಲಿ ಲೋಕೋಪಯೋಗಿ ಇಲಾಖೆ ಇಂಜಿನಿಯರಿಂಗ್ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ.

ಆ) ಮೇಲೆ ಹೇಳಿದಂತೆ ತಾಲ್ಲೂಕು ಅಭಿವೃದ್ಧಿ ಮಂಡಳಿ ಹಾಗೂ ಜಿಲ್ಲಾ ಸ್ಥಳೀಯ ಮಂಡಳಿ ಸಂಸ್ಥೆಗಳನ್ನು ಕಂದಾಯ ಇಲಾಖೆಯಲ್ಲಿ ವಿಲೀನಗೊಳಿಸಿಲ್ಲ. ಆದರೆ, ಆ ಸಂಸ್ಥೆಗಳ ಸಿಬ್ಬಂದಿಯನ್ನು ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ವಿಲೀನಗೊಂಡ ನೌಕರರ ಜೇಷ್ಟತೆಯನ್ನು ಕಾಪಾಡುವ ಬಗ್ಗೆ ಅವಕಾಶಗಳನ್ನು ಕಲ್ಪಿಸಲಾಗಿದೆ.

ಉ) ತಾಲ್ಲೂಕು ಅಭಿವೃದ್ಧಿ ಮಂಡಳಿ ಸೇವೆಯಲ್ಲಿದ್ದ ನೌಕರರು, ಕಂದಾಯ ಅಧೀನ ಶಾಖೆಯಲ್ಲಿ ವಿಲೀನಗೊಂಡ ಸಂಬಂಧದಲ್ಲಿ ಅವರ ಜೇಷ್ಟತೆಯನ್ನು ಅವರು ವಿಲೀನಿಕರಣ ದಿನಾಂಕದಿಂದ ಅಂದರೆ 28-7-76 ವಿಲೀನಗೊಳಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.

ಊ) ಇಲ್ಲ.

ಋ) ಬಂದಿರಲಿಲ್ಲ.

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ

172(1897) ಶ್ರೀ ನಾರಾಯಣಸ್ವಾಮಿ. ಎ. (ಆನೇಕಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. "ಪ್ರಧಾನ ಮಂತ್ರಿ ಗ್ರಾಮ ಸಡಕ್" ಯೋಜನೆಯಡಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಮಂಜೂರಾತಿ ಸಿಕ್ಕಿರುವ ರಸ್ತೆಗಳ ವಿವರವನ್ನು ಜಿಲ್ಲಾವಾರು ತಾಲ್ಲೂಕುವಾರು ನೀಡುವುದು?

2. ಸದರಿ ಯೋಜನೆಯಡಿ ರಸ್ತೆ ಕಾಮಗಾರಿಗಳ ಮಂಜೂರಾತಿ ದೊರೆತಿದ್ದರೂ ಕಾಮಗಾರಿಯನ್ನು ಪ್ರಾರಂಭಿಸದ ಗುತ್ತಿಗೆದಾರ ಸಂಸ್ಥೆಗಳ ಹೆಸರುಗಳನ್ನು ನೀಡುವುದು?

3. ಮಂಜೂರಾತಿ ಪಡೆದಿರುವ ಕಾಮಗಾರಿಗಳನ್ನು ಪೂರೈಸಲು ಉಂಟಾಗಿರುವ ವಿಳಂಬಕ್ಕೆ ಕಾರಣಗಳನ್ನು ತಿಳಿಸುವುದು?

4. ಸದರಿ ಕಾಮಗಾರಿಗಳ ತ್ವರಿತವಾಗಿ ಪ್ರಾರಂಭ ಮಾಡಿ ಪೂರೈಸಲು ಸರ್ಕಾರ ತೆಗೆದುಕೊಂಡಿರುವ ಅಗತ್ಯ ಕ್ರಮಗಳಾವುವು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

1. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಮಂಜೂರಾತಿ ಸಿಕ್ಕಿರುವ ರಸ್ತೆಗಳ ಜಿಲ್ಲಾವಾರು, ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

2. ಡಾಂಬರೀಕರಣಗೊಂಡ ಎರಡು ಕಾಮಗಾರಿಗಳನ್ನು ಹೊರತು ಪಡಿಸಿ 2000-01ನೇ ಸಾಲಿನ ಎಲ್ಲಾ ಕಾಮಗಾರಿಗಳನ್ನೂ ಪ್ರಾರಂಭಿಸಲಾಗಿದೆ.

3. ಸೆಂಟ್ರಲ್ ರೋಡ್ ರೀಸರ್ಚ್ ಇನ್ಸ್‌ಟಿಟ್ಯೂಟ್, ನವದೆಹಲಿ ಅವರಿಂದ ಜೂನ್-2001 ರಲ್ಲಿ 2000-01ನೇ ಸಾಲಿನ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಅನುಮೋದನೆ ದೊರೆತ ನಂತರ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕಾಮಗಾರಿಗಳನ್ನು ಪ್ರಾರಂಭಿಸಲು ವಿಳಂಬವಾಗಿದೆ. ಕರ್ನಾಟಕ ಭೂ ಸೇನಾ ನಿಗಮವು ಅನುಮೋದನೆಯ ನಂತರ ಬೇಗನೆ ಕಾಮಗಾರಿಗಳನ್ನು ಪ್ರಾರಂಭಿಸಿದ್ದರೂ ಬಿಟುಮಿನ್ ಪೂರೈಕೆಯ ವ್ಯತ್ಯಯದಿಂದ ವಿಳಂಬವಾಗಿದೆ..

4. ಇಲಾಖೆಯು ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ನಿಯತಕಾಲಿಕವಾಗಿ ಪರಿಶೀಲನೆ ಹಾಗೂ ಕಾಮಗಾರಿಗಳ ಪರಿವೀಕ್ಷಣೆ ನಡೆಸಲಾಗುತ್ತಿದೆ.

Annexure

District & Talukwise details of Pradhana Mantri Gram Sadak Yojana for the year 2000-01, 2001-02 & 2002-03

Sl. No.	Name of District	Name of Taluk	2000-01 Total No. of Works	2000-01 Total Estimated Cost (Rs. in lakhs)	2001-02 & 2002-03 Total No. of Works	2001-02 & 2002-03 Total Estimated Cost (Rs. in lakhs)
1	2	3	4	5	6	7
1.	Bagalkot	Bagalkot	3	53.15	7	108.00
		Badami	3	67.65	3	88.00
		Hungund	4	57.27	8	108.75
		Mudhol	3	64.67	5	108.00
		Bilgi	4	65.63	8	108.00
		Jamkhandi	4	63.36	8	108.00
2.	Bangalore(R)	Channapatna	2	58.15	6	120.00
		Devanahalli	1	53.46	14	108.00
		Kankapura	1	49.80	7	120.00
		Magadi	2	75.27	9	114.00
		Ramagagaram	1	39.92	7	120.00
		Nelamangala	2	78.02	12	125.50
		D.B. Pur	1	60.60	13	120.00
		Hosakote	1	42.95	7	119.50
3.	Bangalore(U)	Bangalore (N)	2	54.28	4	108.00
		Bangalore (S)	2	54.43	5	104.00
		Anekal	1	32.76	5	139.50

1	2	3	4	5	6	7
4.	Belgaum	Belgaum	2	55.73	2	107.60
		Bailahongal	2	77.97	4	103.00
		Ramdurga	1	69.38	2	107.96
		Kanapur	1	32.06	2	108.12
		Soundatti	1	43.50	5	108.00
		Raibag	2	62.60	2	108.00
		Hukkeri	2	39.52	3	108.00
		Gokak	2	79.83	3	108.00
		Athani	1	101.73	24	912.20
		Chikkodi	2	93.60	3	144.00
5.	Bellary	Bellary	2	62.95	6	108.00
		Sandur	2	56.76	2	108.00
		Hospet	2	51.36	4	108.00
		Siraguppa	2	53.90	7	108.00
		Hadagali	2	73.98	3	108.00
		H.B.halli	1	67.72	2	108.00
		Kudligi	1	41.35	3	108.00
6.	Bidar	B.Kalyana	1	50.38	3	108.00
		Balki	3	87.55	4	108.00
		Bidar	2	67.08	3	108.00
		Humnabad	2	49.99	4	108.00
		Aurad	1	98.98	4	108.00
7.	Bijapur	Bijapur	2	52.55	6	108.00
		B.Bagewadi	1	50.15	5	108.00
		Muddebihal	2	62.65	7	108.00
		Indi	1	37.38	4	108.00
		Sindagi	1	51.64	4	108.00
8.	C.R. Nagar	C.R. Nagar	2	63.11	3	120.00
		Gundlupet	2	80.29	4	103.80
		Yelandur	1	29.15	5	108.00
		Kollegal	2	88.96	3	108.00
		Mudigere	3	55.92	8	115.00
		Koppa	2	54.20	8	108.00
		Sringeri	3	50.88	8	108.00
9.	Chickmagalur	N.R. Pura	2	51.82	4	108.00
		Chickmagalur	4	56.91	6	108.00
		Kadur	2	50.89	4	108.00
		Tarikere	2	55.30	4	107.00
10.	Chitradurga	Chitradurga	3	48.80	5	108.00
		Challakere	3	53.55	9	108.00
		Hiriyur	2	52.37	9	108.00
		Hosadurga	2	44.51	6	108.00
		Holakere	3	54.79	6	108.00
		Malakalmuru	2	43.65	6	108.00

1	2	3	4	5	6	7
11.	D.Kannada	Mangalore	4	49.33	11	108.00
		Bantwal	4	49.19	11	108.00
		Puttur	4	49.78	12	108.00
		Sullia	4	50.97	9	108.00
		Belthangady	4	50.01	8	108.00
12.	Davanagere	Davangere	1	64.06	8	108.00
		Harihara	4	62.31	16	108.00
		Chennagiri	9	96.64	6	108.00
		Honnali	4	54.66	4	108.00
		H.P.Halli	2	49.85	7	108.00
		Jagalur	1	52.62	7	108.00
13.	Dharwad	Dharwad	2	48.93	2	108.55
		Hubli	1	61.52	2	108.00
		Navalgund	1	75.88	6	107.99
		Khalgatagi	1	55.41	4	108.00
		Kundagod	2	68.70	3	108.00
		Gadag	1	70.83	4	106.00
		Mundargi	1	86.07	4	108.00
14.	Gadag	Ron	2	60.17	4	108.00
		Shirahatti	2	53.61	3	110.00
		Naragund	1	62.65	3	102.50
15.	Gulbarga	Afzalpur	1	62.90	2	108.00
		Alnd	2	51.01	4	108.00
		Chittapur	2	79.44	5	108.00
		Gulbarga	2	73.76	4	103.00
		Chincholli	1	60.57	3	113.00
		Yadgir	2	70.68	3	107.79
		Shahapur	1	77.20	4	107.05
		Shorapur	2	61.11	4	107.62
		Jewargi	2	67.61	2	107.95
		Sedam	1	78.73	1	112.64
16.	Hassan	Belur	8	65.19	3	108.00
		Hassan	5	65.69	10	108.00
		Alur	8	63.74	9	108.00
		Arkalgud	3	54.48	6	108.00
		Sakaleshpur	6	65.49	11	108.00
		Arasikere	5	60.86	9	127.00
		H.N. Pura	3	56.15	7	108.00
		C.R. Patna	5	50.34	9	108.00
17.	Haveri	Hanagal	2	51.86	4	124.15
		Haveri	2	75.93	4	123.00
		Hirekerur	1	65.84	4	126.00
		Savanur	2	50.10	5	123.80
		Shiggaon	2	57.34	4	129.50
		Byadagi	3	65.8	5	146.00

1	2	3	4	5	6	7
18.	Kodagu	Madikeri	2	51.96	7	108.00
		Somwarpet	3	56.96	6	108.00
		Virajpet	2	49.24	7	108.00
19.	Kolar	Bagepalli	3	49.16	2	111.85
		C.B.Pur	2	46.09	3	109.75
		Chintamani	2	48.87	6	108.00
		Gowribidanur	3	45.11	7	108.00
		Gudibanda	2	49.08	5	108.00
		Sidlaghatta	2	64.89	6	108.00
		Kolar	2	50.59	5	108.00
		Malur	1	56.77	3	110.62
		Mulbagal	2	45.47	2	108.00
		Bangarpet	3	66.57	5	108.00
		Srinivasapura	2	52.82	4	108.00
20.	Koppal	Gangavathi	3	70.24	9	108.00
		Koppal	3	78.63	7	135.50
		Kushtagi	4	56.39	7	108.00
		Yelburga	1	43.88	6	108.00
21.	Mandya	K.R. Pet	2	62.49	3	108.00
		Nagamangala	2	52.43	2	108.00
		Pandavapura	3	79.27	3	111.00
		S.R. Patna	2	48.64	4	108.00
		Maddur	1	41.37	4	108.00
		Malavalli	1	24.25	5	107.99
		Mandya	6	79.36	4	117.00
22.	Mysore	H.D.Kote	2	63.18	6	108.00
		Hunsur	1	30.24	2	108.00
		K.R.Nagar	1	55.52	4	108.00
		Piriyapatna	2	61.08	4	108.00
		Mysore	2	57.51	3	108.00
		Nanjangud	2	65.44	5	108.00
		T.Narasipura	3	76.41	4	108.00
23.	Raichur	Raichur	6	59.58	2	108.00
		Manvi	4	78.46	6	108.00
		Lingasugur	2	59.50	11	108.00
		Deodurga	3	59.41	7	108.00
		Sindanur	7	69.55	5	108.00
24.	Shimoga	Shimoga	4	75.32	10	108.00
		Bhadravathi	4	70.77	15	108.00
		Thirthahalli	2	66.55	7	108.00
		Sagar	4	64.67	4	108.00
		Hosanagar	2	49.53	6	108.00
		Soraba	2	54.08	2	108.00
		Shikaripura	5	63.57	3	108.00

1	2	3	4	5	6	7
25.	Tumkur	Tumkur	2	54.23	4	108.00
		Gubbi	2	54.11	3	108.00
		Kunnigal	2	57.27	4	108.00
		Turuvekere	2	49.07	4	108.00
		Tiptur	2	58.09	4	108.00
		Pavagada	2	52.44	4	108.00
		Koratagere	2	51.56	5	108.00
		Madhugiri	2	50.78	7	108.00
		Sira	1	62.40	4	108.00
		C.N. Halli	2	55.54	5	108.00
26.	Udupi	Udupi	2	24.35	9	306.15
		Karkala	5	80.85	7	106.00
		Kundapur	2	49.52	5	148.00
		Karwar	3	52.62	3	108.00
		Ankola	1	59.62	3	108.00
		Honnavara	2	62.60	5	140.00
		Bhatkal	2	59.42	4	108.70
		Kumta	1	55.82	2	108.00
27.	U.Kannada	Joida	1	59.42	4	105.50
		Haliyal	2	61.35	4	107.00
		Yellapur	2	55.02	2	108.00
		Mundgod	1	59.00	5	108.00
		Sirsi	1	55.00	4	130.00
		Siddapur	2	59.94	2	108.00
		Total	**414**	**10352.21**	**938**	**20335.03**

ನಗರಸಭೆ:ಪುರಸಭೆ:ಪಟ್ಟಣ ಪಂಚಾಯಿತಿಗಳಲ್ಲಿ ಕಂದಾಯ ಪರಿಷ್ಕರಣ ನಿಯಮ

176(1427) ಶ್ರೀ ಶಿವಣ್ಣ ಎಸ್. (ತುಮಕೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ನಗರಸಭೆ: ಪುರಸಭೆ : ಪಟ್ಟಣ ಪಂಚಾಯಿತಿ ಪ್ರತಿ ಐದು ವರ್ಷಕ್ಕೊಮ್ಮೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಂದಾಯ ಪರಿಷ್ಕರಣೆ ನಿಯಮ ಅಳವಡಿಸಲಾಗಿದೆಯೇ? ಇಲ್ಲವಾದಲ್ಲಿ, ಕಂದಾಯ ಪರಿಷ್ಕರಣೆ ಮಾಡಲು ಗ್ರಾಮ ಪಂಚಾಯ್ತಿಯು ತೆಗೆದುಕೊಳ್ಳಬೇಕಾದ ಕ್ರಮಗಳೇನು?

2) ಹಾಲಿ ಗ್ರಾಮ ಪಂಚಾಯಿತಿಯಲ್ಲಿ (ಮನೆ:ನಿವೇಶನ ಪಟ್ಟಿ) ತಯಾರಿಸುವ ಅವಕಾಶ ಗ್ರಾಮ ಪಂಚಾಯ್ತಿ ಕಾಯ್ದೆಯಲ್ಲಿ ಇದೆಯೇ : ಇಲ್ಲವಾದಲ್ಲಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ನಿವೇಶನ : ಮನೆಗಳ ಅಳತೆ ಹಾಗೂ ಸ್ಥಿತಿಗತಿಯ ಬಗ್ಗೆ ನಿರ್ಧಾರಣಾ ಮಾಡುವ ತಃಖ್ತೆ ಯಾವುದು?

3) ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಗ್ರಾಮಗಳಲ್ಲಿನ ಗ್ರಾಮ ಸರಹದ್ದುಗಳಲ್ಲಿನ ಸರ್ವೆ ನಂಬರ್: ಜಮೀನುಗಳಲ್ಲಿ ನಿರ್ಮಾಣ ಮಾಡಿಕೊಂಡಿರುವ ಮನೆ ಖಾತೆ : ಕಂದಾಯದ ಬಗ್ಗೆ ಕ್ರಮ ಕೈಗೊಳ್ಳಲು ಅಧಿಕಾರವುಳ್ಳ ಪ್ರಾಧಿಕಾರ ಯಾವುದು?